# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 260 | Pages. 2 | Date: 29-09-2026, TUESDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 260 - ಪುಟಗಳು : 2 | 29-09-2026 ಮಂಗಳವಾರ | Ph: 8762954248 | ದರ : ₹1


# ಹಾಸನಾಂಬ ಜಾತ್ರೆಗೆ ರೈಲ್ವೆ ಮೇಲ್ಸೇತುವೆ ಕೆಲಸ ಪೂರ್ಣ

## ಕಾಮಗಾರಿ ಪರಿಶೀಲಿಸಿದ ಸಂಸದ ಶ್ರೇಯಸ್ ಪಟೇಲ್ | ಅಧಿಕಾರಿಗಳಿಗೆ ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಹಾಸನಾಂಬ ಜಾತ್ರೆ ಆರಂಭವಾಗುವುದರ ಒಳಗೆ ರೈಲ್ವೆ ಮೇಲ್ಸೇತುವೆ ಕಾಮಗಾರಿ ಪೂರ್ಣಗೊಳಿಸಿ ವಾಹನಗಳ ಓಡಾಡಕ್ಕೆ ಅವಕಾಶ ಮಾಡಿಕೊಡಲಾಗುವುದು ಎಂದು ಸಂಸದ ಶ್ರೇಯಸ್ ಪಟೇಲ್ ತಿಳಿಸಿದರು.

ರೈಲ್ವೆ ಮೇಲ್ಸೇತುವೆ ಕಾಮಗಾರಿಯನ್ನು ಸೋಮವಾರ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 2019 ರಿಂದ ನಡೆಯುತ್ತಿರುವ ಕಾಮಗಾರಿಯನ್ನು ಇನ್ನೊಂದು ತಿಂಗಳೊಳಗೆ ಪೂರ್ಣಗೊಳಿಸಲಾಗುವುದು. ಸರ್ವಿಸ್ ರಸ್ತೆ ಕಾಮಗಾರಿ ಹೊರತುಪಡಿಸಿ ಉಳಿದ ಕಾಮಗಾರಿಯನ್ನು ಪೂರ್ಣಗೊಳಿಸಿ ಮುಖ್ಯ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಸೂಚಿಸಲಾಗಿದೆ ಎಂದರು.

ಸರ್ವಿಸ್ ರಸ್ತೆಯನ್ನೂ ಈಗಲೇ ಮುಗಿಸಬೇಕೆಂದು ಆದೇಶಿಸಿದರೆ ಕೆಲಸ ಮುಗಿಯುವುದು ಮತ್ತಷ್ಟು ತಡವಾಗುತ್ತದೆ. ನಮ್ಮ ನಿರೀಕ್ಷೆ ಪ್ರಕಾರ ಇಷ್ಟೊತ್ತಿಗೆ ಕೆಲಸ ಮುಗಿಯಬೇಕಿತ್ತು. ಅದಕ್ಕೆ ಕಾರಣ ಕೇಳಿದರೆ ಯುದ್ಧದ ನೆಪ ಹೇಳುತ್ತಾರೆ. ಸರ್ವಿಸ್ ರಸ್ತೆ ಕಾಮಗಾರಿ ಸ್ಥಳದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಬಾಕಿಯಿಲ್ಲ. ಅಂಡರ್ ಪಾಸ್ ಜಾಗದ ಭೂವಿವಾದ ನ್ಯಾಯಾಲಯದಲ್ಲಿದೆ. ಆದಷ್ಟು ಬೇಗ ಸಮಸ್ಯೆ ಇತ್ಯರ್ಥಪಡಿಸಲಾಗುವುದೆಂದರು.

ಇದೇ ವೇಳೆ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿ ಕುರಿತು ಪ್ರತಿಪಕ್ಷಗಳ ಟೀಕೆಗೆ ಪ್ರತಿಕ್ರಿಯಿಸಿದ ಅವರು, ರಾಜ್ಯ ಸರ್ಕಾರದ ಬೊಕ್ಕಸ ಖಾಲಿಯಾಗಿಲ್ಲ. ಸರ್ಕಾರ ಸುಭದ್ರವಾಗಿದೆ. ಆರ್ಥಿಕ ಸಮಸ್ಯೆಗಳು ಇದ್ದಿದ್ದರೆ ಇಷ್ಟೊಂದು ಯೋಜನೆಗಳನ್ನು ಮುಂದುವರಿಸಲು ಸಾಧ್ಯವಾಗುತ್ತಿತ್ತೇ ಎಂದು ಪ್ರಶ್ನಿಸಿದರು. ರಾಜ್ಯ ಸರ್ಕಾರಕ್ಕೆ ಆರ್ಥಿಕ ಮುಗ್ಗಟ್ಟು ಎದುರಾಗಿದೆ ಎಂಬ ಆರೋಪಗಳು ಶುದ್ಧ ಸುಳ್ಳು. ಜನರ ವಿಶ್ವಾಸದೊಂದಿಗೆ ಸರ್ಕಾರ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದೆ ಎಂದು ಸಮರ್ಥಿಸಿಕೊಂಡರು.



### ಎನ್.ಹೆಚ್. 373 ಪ್ರಗತಿ ಪರಿಶೀಲನಾ ಸಭೆ

ಹಾಸನಬೇಲೂರು ರಾಷ್ಟ್ರೀಯ ಹೆದ್ದಾರಿ 373ಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಂಸದ ಶ್ರೇಯಸ್ ಪಟೇಲ್ ಸಭೆ ನಡೆಸಿದರು.

ರಾಷ್ಟ್ರೀಯ ಹೆದ್ದಾರಿ ಕಾಮಗಾರಿಯ ಪ್ರಸ್ತುತ ಪ್ರಗತಿ, ಬಾಕಿ ಇರುವ ಕಾಮಗಾರಿ, ಸಾರ್ವಜನಿಕರಿಗೆ ಎದುರಾಗುತ್ತಿರುವ ಸಮಸ್ಯೆಗಳು ಹಾಗೂ ಕಾಮಗಾರಿ ಪೂರ್ಣಗೊಳಿಸುವಲ್ಲಿ ಎದುರಾಗಿರುವ ಅಡಚಣೆಗಳ ಕುರಿತು ಅಧಿಕಾರಿಗಳೊಂದಿಗೆ ಸಮಗ್ರವಾಗಿ ಚರ್ಚಿಸಿದರು.

ಹಾಸನಬೇಲೂರು ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯನ್ನು ಗುಣಮಟ್ಟದೊಂದಿಗೆ, ತ್ವರಿತಗತಿಯಲ್ಲಿ ಹಾಗೂ ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾಧಿಕಾರಿ ಕೆ.ಎಸ್. ಲತಾ ಕುಮಾರಿ ಮತ್ತಿತರರಿದ್ದರು.

**ಸಾಲ ಮನ್ನಾಗೆ ನಮ್ಮ ಸಹಕಾರ ಇತ್ತು**

ಹೆಚ್.ಡಿ.ಕುಮಾರಸ್ವಾಮಿ ಅವರು ಸಾಲ ಮನ್ನಾ ಮಾಡಿದ್ದು ಕಾಂಗ್ರೆಸ್ ಬೆಂಬಲದಿಂದ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ನಾನು ರಾಜಕೀಯವಾಗಿ ಅವರ ಹೇಳಿಕೆಗೆ ಪ್ರತಿಕ್ರಿಯಿಸುವುದಿಲ್ಲ. ಅದು ಪಕ್ಷದ ಸಹಭಾಗಿತ್ವ ಹಾಗೂ ವಿಶ್ವಾಸದೊಂದಿಗೆ ಕೈಗೊಂಡ ಕಾರ್ಯಕ್ರಮವಾಗಿತ್ತು ಎಂದರು.

ಈಗ ಮತ್ತೆ ಸಾಲ ಮನ್ನಾ ಮಾಡಬೇಕಾದರೆ ಕೇಂದ್ರ ಸರ್ಕಾರವೂ ಕೈಜೋಡಿಸಬೇಕು. ಕರ್ನಾಟಕದ ವಿಚಾರದಲ್ಲಿ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸಬಾರದು ಎಂದರು.

ಕಸ್ತೂರಿ ರಂಗನ್ ವರದಿ ವಿಚಾರದಲ್ಲಿಯೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮಲೆನಾಡಿನ ಜನರ ಪರ ಧ್ವನಿ ಎತ್ತಿದ್ದಾರೆ. ಮಲೆನಾಡಿನ ಜನರ ಹಿತ ಕಾಪಾಡುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಲಿದೆ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ರಂಜಿತ್ ಗೊರೂರು, ಮುಖಂಡರಾದ ದೇವರಾಜೇಗೌಡ, ಚಂದ್ರಶೇಖರ್, ಬನವಾಸೆ ರಂಗಸ್ವಾಮಿ ಹಾಗೂ ರೈಲ್ವೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ಪ್ರಧಾನಿ ಮೋದಿ ನೇತೃತ್ವದಲ್ಲಿ ದೇಶ ಅಭಿವೃದ್ಧಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಸಕಲೇಶಪುರ: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಹಾಗೂ ಜನಕಲ್ಯಾಣ ಕಾರ್ಯಕ್ರಮಗಳಿಂದ ದೇಶವು ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ಸಕಲೇಶಪುರ ಮಂಡಲ ಭಾರತೀಯ ಜನತಾ ಪಕ್ಷ ಹಾಗೂ ಮಹಿಳಾ ಮೋರ್ಚಾ ವತಿಯಿಂದ ಸೇವಾ ಸಂಕಲ್ಪ ಅಭಿಯಾನದ ಅಂಗವಾಗಿ ನಗರದ ಕುಶಾಲನಗರದ ಅಣ್ಣಪ್ಪಸ್ವಾಮಿ ವೃತ್ತದಲ್ಲಿ ಆಯೋಜಿಸಿದ್ದ ರಂಗೋಲಿ ಸ್ಪರ್ಧೆಗೆ ಭೇಟಿ ನೀಡಿ, ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

ದೇಶದ ಅಭಿವೃದ್ಧಿಯೊಂದಿಗೆ ಮಹಿಳೆಯರು, ಯುವಕರು, ರೈತರು ಹಾಗೂ ವಿವಿಧ ವರ್ಗಗಳ ಸಬಲೀಕರಣಕ್ಕೆ ಕೇಂದ್ರ ಸರ್ಕಾರ ಹಲವು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ. ಅಭಿವೃದ್ಧಿ ಕಾರ್ಯಗಳಲ್ಲಿ ಜನರ ಸಹಭಾಗಿತ್ವವೂ ಪ್ರಮುಖವಾಗಿದ್ದು, ಸಮಾಜದ ಎಲ್ಲ ವರ್ಗದವರು ದೇಶದ ಪ್ರಗತಿಗೆ ಕೈಜೋಡಿಸಬೇಕು ಎಂದು ಹೇಳಿದರು.

ಸ್ಪರ್ಧೆಯಲ್ಲಿ ಉತ್ತಮ ಪ್ರದರ್ಶನ ನೀಡಿದ ವಿಜೇತರಿಗೆ ಶಾಸಕ ಸಿಮೆಂಟ್ ಮಂಜು ಬಹುಮಾನ ವಿತರಿಸಿ ಅಭಿನಂದಿಸಿದರು.

ಬಿಜೆಪಿ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ನೇತ್ರಾವತಿ ಮಂಜುನಾಥ್, ಸಕಲೇಶಪುರ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷೆ ಬಬಿತಾ ವಿಶ್ವನಾಥ್, ಮಂಡಲ ಪ್ರಧಾನ ಕಾರ್ಯದರ್ಶಿ ಅಗ್ನಿ ಸೋಮಶೇಖರ್, ಮಧು ಬೊಮ್ಮನಕೆರೆ ಮತ್ತಿತರರಿದ್ದರು.

# ಮಾನವೀಯ ಮೌಲ್ಯಗಳ ಅಳವಡಿಸಿಕೊಂಡು ಸತ್ಪ್ರಜೆಗಳಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಸತ್ಪ್ರಜೆಯಾಗಿ ಬೆಳೆಯಬೇಕೆಂದು ಹಾಸನ ವಿಶ್ವವಿದ್ಯಾಲಯದ ಮೌಲ್ಯಮಾಪನ ಕುಲಸಚಿವ ಪ್ರೊ. ಎಸ್.ನಾಗರಾಜು ಕಿವಿಮಾತು ಹೇಳಿದರು.

ನಗರದ ಕುವೆಂಪು ಪ್ರಥಮ ದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ಮತ್ತು ಅಂತಿಮ ವರ್ಷದ ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ಪದವಿಯಿಂದ ಉದ್ಯೋಗ ಹಾಗೂ ಆರ್ಥಿಕ ದೃಢತೆ ಸಿಗುತ್ತದೆ. ಉನ್ನತ ಶಿಕ್ಷಣ ಪಡೆಯುವ ಅವಕಾಶ ಲಭಿಸುತ್ತದೆ. ಸಾಮಾಜಿಕ ಗೌರವ ದೊರೆಯುತ್ತದೆ. ಜೊತೆಗೆ ಕೇವಲ ವಿದ್ಯೆ ಸಂಪಾದಿಸಿದರೆ ಸಾಲದು, ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಮಹನೀಯರು




ಹಾಕಿಕೊಟ್ಟ ಮಾರ್ಗದಲ್ಲಿ ವಿದ್ಯಾರ್ಥಿಗಳು ಸಾಗಬೇಕು ಎಂದರು. ಪತ್ರಕರ್ತ ಬಿ.ಆರ್.ಉದಯಕುಮಾರ್ ಮಾತನಾಡಿ, ಕನ್ನಡ ಮಾಧ್ಯಮದಲ್ಲಿ ಓದಿದ ವಿದ್ಯಾರ್ಥಿಗಳು ಕೂಡ ಉತ್ತಮ ಸಾಧನೆ ಮಾಡಲು ಸಾಧ್ಯ. ವಿದ್ಯಾರ್ಥಿಗಳು ಸಮಯ ಪಾಲನೆ, ಸಾಮಾಜಿಕ ಬದ್ಧತೆ, ಶಿಸ್ತು, ಪರಿಶ್ರಮ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಜೀವನದಲ್ಲಿ ಹಿಂಜರಿಕೆ ಬೇಡ, ವಿದ್ಯೆ ಇದ್ದರೆ ಸಾಲದು ವಿನಯವು ಇರಬೇಕು. ತಂದೆ-ತಾಯಿ, ಶಿಕ್ಷಕರಿಗೆ, ನೀವು ಕಲಿತ ಶಾಲಾ ಕಾಲೇಜಿಗೆ ಗೌರವ ಕೊಡಿ. ಸ್ಪರ್ಧಾತ್ಮಕ ಯುಗವನ್ನು ಸರಿಯಾದ ರೀತಿ ಎದುರಿಸಿ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ಕಾರ್ಯದರ್ಶಿ ಬಿ.ಈ. ಶಿವರಾಮೇಗೌಡ ಮಾತನಾಡಿ, ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು, ಪರಿಶ್ರಮ ರೂಪಿಸಿಕೊಂಡು ಯಶಸ್ಸು ಪಡೆಯಬೇಕು. ನಿಮಗೆ ಜನ್ಮ ನೀಡಿದ ತಂದೆ-ತಾಯಿ, ವಿದ್ಯೆ ಕಲಿಸಿದ ಗುರು, ಎಲ್ಲವನ್ನು ಕೊಟ್ಟ ಸಮಾಜಕ್ಕೆ ಯಾವಾಗಲೂ ಋಣಿಯಾಗಿರಿ ಎಂದರು.

ಪ್ರಾಂಶುಪಾಲ ಕೆ.ಆರ್.ಹರೀಶ್ ಮಾತನಾಡಿ, ಕಾಲೇಜು ಪ್ರಾರಂಭವಾದಾಗ 180 ವಿದ್ಯಾರ್ಥಿಗಳು ದಾಖಲಾಗಿದ್ದು, ಪ್ರಸ್ತುತ ಸಾಲಿನಲ್ಲಿ 405 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಕಾಲೇಜಿನಲ್ಲಿ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ಸಾಂಸ್ಕೃತಿಕ ಸಂಘ, ಮಹಿಳಾ ದೌರ್ಜನ್ಯ ನಿವಾರಣ ಸಮಿತಿ, ರೆಡ್ ಕ್ರಾಸ್ ಘಟಕ ಸ್ಥಾಪನೆ, ಕಾಲೇಜು ಪ್ರವಾಸ ಹಾಗೂ ಪರೀಕ್ಷೆಗಳಲ್ಲಿ ಉತ್ತಮ ಫಲಿತಾಂಶ ದಾಖಲಿಸುತ್ತಿದೆ ಎಂದರು.

# ಚು. ಆಯೋಗದ ವಿರುದ್ಧ ಜಿಲ್ಲಾ ಕಾಂಗ್ರೆಸ್ ಬೃಹತ್ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಕೇಂದ್ರ ಚುನಾವಣಾ ಆಯೋಗ ಸರ್ವಾಧಿಕಾರಿ ಧೋರಣೆ ತಾಳುತ್ತಿದೆ ಹಾಗೂ ಬಿಜೆಪಿ ಪರವಾದ ಪಕ್ಷಪಾತದ ನಿಲುವು ಪ್ರದರ್ಶಿಸುತ್ತಿದೆ ಎಂದು ಆರೋಪಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಸೋಮವಾರ ಪ್ರತಿಭಟನೆ ನಡೆಸಲಾಯಿತು.

ಸಂಸದ ಶ್ರೇಯಸ್ ಎಂ.ಪಟೇಲ್ ನೇತೃತ್ವದಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಿಂದ ಕೇಂದ್ರ ಸರ್ಕಾರ, ಸಿಇಸಿ ವಿರುದ್ಧದ ನಾಮಫಲಕ ಹಿಡಿದು ಮೆರವಣಿಗೆ ಆರಂಭಿಸಿದ ಪ್ರತಿನಾಕಾರರು, ಬಿಎಂ ರಸ್ತೆ ಮೂಲಕ ಸಾಗಿ ಎನ್.ಆರ್.ವೃತ್ತದಲ್ಲಿ ಕೇಂದ್ರ ಮತ್ತು ಚುನಾವಣಾ ಆಶಯುಕ್ತರ ಪ್ರತಿಕೃತಿ ದಹಿಸಿ ಆಕ್ರೋಶ ಹೊರ ಹಾಕಿದರು.




ಕೇಂದ್ರ ಸರ್ಕಾರ, ಸಂವಿಧಾನ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಬುಡಮೇಲು ಮಾಡುವ ರೀತಿಯಲ್ಲಿ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರು ನಡೆದುಕೊಳ್ಳುತ್ತಿದ್ದಾರೆ. ಅರ್ಹ ಮತದಾರರನ್ನು ಸೇರ್ಪಡೆಗೊಳಿಸುವ ಬದಲು ಮತದಾರರ ಪಟ್ಟಿಯಿಂದ ಹೊರದಬ್ಬುವ ಪ್ರಕ್ರಿಯೆಯಲ್ಲಿ ಭಾಗಿಯಾಗಿರುವುದು ಅತ್ಯಂತ ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ಪಕ್ಷಪಾತದಿಂದ ವರ್ತಿಸುತ್ತಿರುವ ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ತಕ್ಷಣವೇ ಹುದ್ದೆಯಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ದೇಶದ್ರೋಹ ಹಾಗೂ ಸಂವಿಧಾನ ವಿರೋಧಿ ನಡವಳಿಕೆಯ ಅಡಿಯಲ್ಲಿ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು.

ಈ ಹೋರಾಟದ ಭಾಗವಾಗಿ ಇಂದು ನಗರದಲ್ಲೂ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಲೋಕಸಭಾ ಸದಸ್ಯರು, ನಾಯಕರು, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿ.ಬಿ.ಶಶಿಧರ್, ಹಾಸನ ಪರಾಜಿತ ಅಭ್ಯರ್ಥಿ ಬನವಾಸೆ ರಂಗಸ್ವಾಮಿ, ಮುಖಂಡರಾದ ರಂಜಿತ್ ಗೊರೂರು, ರಘು ದಾಸರಕೊಪ್ಪಲು, ಚಂದ್ರಶೇಖರ್, ಹೆಚ್.ಟಿ.ಲಕ್ಷ್ಮಣ್, ಸಲೀಂ ಕೊಲ್ಲಹಳ್ಳಿ, ವಕ್ತಾರ ಮಂಜುನಾಥ ಶರ್ಮಾ, ಕಾರ್ಮಿಕ ವಿಭಾಗದ ಜಿಲ್ಲಾಧ್ಯಕ್ಷ ಹೇಮಂತ್ ಕುಮಾರ್ ಮೊದಲಾದವರಿದ್ದರು.

# ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸಲು ಸಲಹೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಸಕಲೇಶಪುರ: ಕ್ರೀಡೆಯಲ್ಲಿ ಗೆಲುವು ಸಾಧಿಸಿದಾಗ ಹಿಗ್ಗದೆ, ಸೋತಾಗ ಕುಗ್ಗದೆ ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು. ನಿರಂತರ ಅಭ್ಯಾಸದ ಮೂಲಕ ಕ್ರೀಡಾಪಟುಗಳು ಪ್ರತಿಭೆ ಅನಾವರಣಗೊಳಿಸಬೇಕು ಎಂದು ಹಿರಿಯ ಬ್ಯಾಡ್ಮಿಂಟನ್ ಆಟಗಾರ ಮಹೇಶ್ ಹೇಳಿದರು.

ಪಟ್ಟಣದ ಎಸ್.ವೈ. ಬ್ಯಾಡ್ಮಿಂಟನ್ ಅಕಾಡೆಮಿಯಲ್ಲಿ ಮಲ್ನಾಡ್ ಶಟ್ಲರ್ಸ್ ವತಿಯಿಂದ ಆಯೋಜಿಸಿದ್ದ ಅಂತರ ಜಿಲ್ಲಾ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಮಾತನಾಡಿ,

ಸಕಲೇಶಪುರದಲ್ಲಿ ಬ್ಯಾಡ್ಮಿಂಟನ್ ಆಟಗಾರ ಯೂಸುಫ್ ಅವರು ಎಸ್.ವೈ. ಬ್ಯಾಡ್ಮಿಂಟನ್ ಅಕಾಡೆಮಿಯನ್ನು ಆರಂಭಿಸಿರುವುದರಿಂದ ಸ್ಥಳೀಯ ಹಾಗೂ ಹೊರ ಜಿಲ್ಲೆಗಳ ಆಟಗಾರರಿಗೆ ತಮ್ಮ ಪ್ರತಿಭೆ ಪ್ರದರ್ಶಿಸಲು ಉತ್ತಮ ವೇದಿಕೆ ದೊರೆತಿದೆ. ಇಂತಹ ಕ್ರೀಡಾಕೂಟಗಳು ಯುವ ಆಟಗಾರರ ಪ್ರತಿಭೆ ಗುರುತಿಸಲು ಸಹಕಾರಿಯಾಗಲಿವೆ.ಗೆಲುವು ಸಾಧಿಸಿದಾಗ ಅಹಂಕಾರ ಪಡದೆ, ಸೋಲನ್ನು ಸವಾಲಾಗಿ ಸ್ವೀಕರಿಸಿ ಮುಂದಿನ ಪಂದ್ಯಾವಳಿಗಳಿಗೆ ಸಿದ್ಧರಾಗಬೇಕು ಎಂದರು.

ಎಸ್.ವೈ. ಬ್ಯಾಡ್ಮಿಂಟನ್ ಅಕಾಡೆಮಿ ಮಾಲೀಕ ಯೂಸುಫ್ ಮಾತನಾಡಿ, ತಾಲೂಕಿನಲ್ಲಿ ಬ್ಯಾಡ್ಮಿಂಟನ್ ಅಭ್ಯಾಸಕ್ಕೆ ಸೂಕ್ತ ವೇದಿಕೆ ಕಲ್ಪಿಸುವ ಉದ್ದೇಶದಿಂದ ಅಕಾಡೆಮಿ ಆರಂಭಿಸಲಾಗಿದೆ. ಯುವ ಆಟಗಾರರು ಇದರ ಸದುಪಯೋಗ ಪಡೆದುಕೊಂಡು ನಿರಂತರ ಅಭ್ಯಾಸ ನಡೆಸಬೇಕು ಹಾಗೂ ಉತ್ತಮ ಸಾಧನೆ ಮಾಡಲು ಯುವ ಆಟಗಾರರು ಪರಿಶ್ರಮ ಪಡಬೇಕು ಎಂದರು.

ಪ್ರಥಮ ಬಹುಮಾನ ವಿತರಿಸಿದ ಉದ್ಯಮಿ ಗಿರೀಶ್,ಉದ್ಯಮಿ ಅಬ್ದುಲ್ ಖಾದರ್, ಪತ್ರಕರ್ತ ಸುಧೀರ್, ಆಟಗಾರರಾದ ಸೂರ್ಯ, ನಿಹಾರ್, ಚಿರಾಯು ಮತ್ತಿತರರಿದ್ದರು.

# ಹೆಚ್.ಬಿ.ರಮೇಶ್ ನಿಧನಕ್ಕೆ ಕಂಬನಿ ಮಿಡಿದ ಜಿಲ್ಲೆಯ ಜನತೆ

## ನೇರ ನುಡಿಯ ಸರಳ ವ್ಯಕ್ತಿತ್ವದ ಯೋಗ ಗುರು | ಕಸಾಪ, ಪತ್ರಕರ್ತರ ಸಂಘ ಶ್ರದ್ಧಾಂಜಲಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಕನ್ನಡ ಸಾಹಿತ್ಯ ಪರಿಷತ್ ಮಾಜಿ ಜಿಲ್ಲಾಧ್ಯಕ್ಷ ಹೆಚ್.ಬಿ.ರಮೇಶ್ ಅವರ ಅಗಲಿಕೆ ತುಂಬಲಾರದ ನಷ್ಟವುಂಟು ಮಾಡಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ ಸಂತಾಪ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಚೇರಿಯಲ್ಲಿ ನಡೆದ ಹೆಚ್.ಬಿ. ರಮೇಶ್ ಅವರ ನಿಧನಕ್ಕೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಕೈಲಾಶ್ ಶಂಕರ್, ನಾಗರತ್ನ, ರಂಗನಾಥ್, ನಿರಂಜನ ಅವರು ದೈಹಿಕ ಶಿಕ್ಷಕರಾಗಿದ್ದ ಅವಧಿಯಲ್ಲಿ ಮುನ್ಸಿಪಲ್ ಶಾಲೆಯಲ್ಲಿ ರಮೇಶ್ ಅವರು ದೈಹಿಕ ಶಿಕ್ಷಣ ಶಿಕ್ಷಕರಾಗಿದ್ದರು. ಆಗಿನ ಕಾಲದಲ್ಲಿ ಶಾಲೆಗಳಲ್ಲಿ ಕ್ರೀಡೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಲಾಗುತ್ತಿತ್ತು. ರಮೇಶ್ ಅವರು ಸ್ವಾಮಿ ವಿವೇಕಾನಂದ ಅವರಿಂದ ಪ್ರಭಾವಿತರಾಗಿ ಮಹಾರಾಜ ಪಾರ್ಕ್‌ನಲ್ಲಿ ವಿವೇಕಾನಂದ ಪ್ರತಿಮೆ ಹಾಗು ಯೋಗ ಶಾಲೆ ತೆರೆದರು. ಅವರು ಯಾವಾಗಲೂ ಬ್ಯಾಗ್ ಹಾಗು ಪುಸ್ತಕಗಳನ್ನು ಜೊತೆಗೆ ತೆಗೆದುಕೊಂಡು ಇರುತ್ತಿದ್ದರು. ನೇರ ನುಡಿ, ಸರಳತೆ ಮೂಲಕ ಮೆಚ್ಚುಗೆ ಗಳಿಸಿದ್ದರು ಎಂದರು.

ಕಸಾಪ ಮಾಜಿ ಜಿಲ್ಲಾಧ್ಯಕ್ಷ ಉದಯರವಿ, ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಬಿ.ಆರ್. ಉದಯಕುಮಾರ್, ಪತ್ರಕರ್ತ ತೌಫಿಕ್ ಅವರು ಮಾತನಾಡಿದರು.

ಕೆಯುಡಬ್ಲ್ಯೂಜೆ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಸಂಘದ ಉಪಾಧ್ಯಕ್ಷರಾದ ಎನ್.ನಂಜುಂಡೇಗೌಡ, ಜಿ.ಪ್ರಕಾಶ್, ರಾಷ್ಟ್ರೀಯ ಮಂಡಳಿ ಸದಸ್ಯ ರವಿ ನಾಕಲಗೂಡು, ಪ್ರಧಾನ ಕಾರ್ಯದರ್ಶಿ ಕೆ.ಜಿ.ಸುರೇಶ್, ಕಾರ್ಯದರ್ಶಿಗಳಾದ ಬಿ.ಆರ್.ಬೊಮ್ಮೇಗೌಡ, ಕೆ.ಎಂ.



ಹರೀಶ್, ಖುಷ್ವಂತ್, ಖಜಾಂಚಿ ಪ್ರಕಾಶ್ ಬೆಳವಾಡಿ ಇದ್ದರು.

ರಮೇಶ್ ನಿಧನಕ್ಕೆ ಕಸಾಪ ಶ್ರದ್ಧಾಂಜಲಿ:

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ, ರಂಗಕರ್ಮಿ ಹಾಗು ಯೋಗ ಗುರು ಹೆಚ್.ಬಿ.ರಮೇಶ್ ಅವರ ಪಾರ್ಥಿವ ಶರೀರಕ್ಕೆ ಸೋಮವಾರ ನಗರದ ಕಸಾಪ ಆವರಣದಲ್ಲಿ ಅಂತಿಮ ನಮನ ಸಲ್ಲಿಸಲಾಯಿತು.

ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು, ಲೇಖಕರು ಹಾಗೂ ರಮೇಶ್ ಅವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ನಗರದ ಮಹಾರಾಜ ಪಾರ್ಕ್‌ನಲ್ಲಿರುವ ವಿವೇಕಾನಂದ ಯೊಗ ಶಾಲೆಯಲ್ಲಿ ಅಂತಿಮ ದರ್ಶನದ ಬಳಿಕ ಪರಿಷತ್ ಆವರಣಕ್ಕೆ ಪಾರ್ಥಿವ ಶರೀರ ತರಲಾಯಿತು. ಒಂದು ನಿಮಿಷ ಮೌನಾಚರಣೆ



ಬಳಿಕ ಹೆಚ್.ಬಿ.ರಮೇಶ್ ಅವರ ಒಡನಾಡಿಗಳು ತಮ್ಮ ಅನಿಸಿಕೆ ಹಂಚಿಕೊಂಡರು. ಮಧ್ಯಾಹ್ನ ಬಿಟ್ಟಗೌಡನಹಳ್ಳಿ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಾಹಿತಿ ಮೇಟಿಕೆರೆ ಹಿರಿಯಣ್ಣ, ಪತ್ರಕರ್ತ ಆರ್.ಪಿ.ವೆಂಕಟೇಶ್‌ಮೂರ್ತಿ, ಕಸಾಪ ಜಿಲ್ಲಾ ಗೌರವ ಕಾರ್ಯದರ್ಶಿ ಬಿ.ಆರ್.ಬೊಮ್ಮೇಗೌಡ ಮಾತನಾಡಿದರು.

ಸ್ಕೌಟ್ಸ್ ಅಂಡ್ ಗೈಡ್ಸ್ ಜಿಲ್ಲಾ ಆಯುಕ್ತ ವೈ.ಎಸ್. ವೀರಭದ್ರಪ್ಪ, ಕಸಾಪ ಮಾಜಿ ಅಧ್ಯಕ್ಷ ಮದನಗೌಡ, ಉದಯರವಿ, ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಜೆ.ಆರ್. ಕೆಂಚೇಗೌಡ, ಸಾಹಿತಿ ಎನ್.ಎಲ್. ಚನ್ನೇಗೌಡ, ಕಸಾಪ ಸಂಘಟನಾ ಕಾರ್ಯದರ್ಶಿ ಆರ್.ಬಿ. ಶಂಕರ್, ಚಂದ್ರಶೇಖರ್, ತಾಲ್ಲೂಕು ಅಧ್ಯಕ್ಷ ಮಮತೇಶ್, ಜಿಲ್ಲಾ ಪದಾಧಿಕಾರಿ ಬಿ.ಎಸ್.ವನಜಾ ಮತ್ತಿತರರಿದ್ದರು.

### ಅಂತಿಮ ನಮನ ಪಡೆದ ಶಂಭುನಾಥ ಶ್ರೀ

ಯೋಗ ಗುರು ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹೆಚ್.ಬಿ. ರಮೇಶ್ ಅವರ ನಿವಾಸಕ್ಕೆ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಭೇಟಿ ನೀಡಿ ಪಾರ್ಥಿವ ಶರೀರಕ್ಕೆ ಅಂತಿಮ ನಮನ ಸಲ್ಲಿಸಿದರು.

ರಮೇಶ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ ಶ್ರೀಗಳು, ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಹಾಗು ಕುಟುಂಬದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥಿಸಿದರು.

ಹಿರಿಯ ಜಾನಪದ ತಜ್ಞ ಡಾ.ಹಂಪನಹಳ್ಳಿ ತಿಮ್ಮೇಗೌಡ, ರಮೇಶ್ ಅವರ ಪುತ್ರ ನಾಗೇಶ್ (ಸಾಹಿತಿ), ಬ್ರಾಹ್ಮಣ ಮಹಾಸಭಾ ಜಿಲ್ಲಾ ಕಾರ್ಯದರ್ಶಿ ವೇಣುಗೋಪಾಲ್, ಜೈನ ಸಮಾಜದ ಮುಖಂಡ ಸುಕೇಶ್ ಮತ್ತಿತರರಿದ್ದರು.

# ಶ್ರೀ ಕೃಷ್ಣನ ತತ್ವಾದರ್ಶ ಎಂದೆಂದಿಗೂ ಮಾದರಿ

## ಸಂಸದ ಶ್ರೇಯಸ್ ಪಟೇಲ್ ಅಭಿಮತ | ನಗರದಲ್ಲಿ ಕೃಷ್ಣ ಜಯಂತಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಹಾಭಾರತ ಯುದ್ಧದಲ್ಲಿ ಅರ್ಜುನ ಅಸಹಾಯಕನಾದಾಗ ಕೃಷ್ಣ ಬೋಧಿಸಿದ ಭಗವದ್ಗೀತೆ ಜಗತ್ತಿನ ಅತ್ಯುನ್ನತ ತತ್ವಜ್ಞಾನ ಗ್ರಂಥವಾಗಿ ಪರಿವರ್ತನೆಯಾಯಿತು. ಅಂತಹ ಮೇಧಾವಿಯನ್ನು ಆರಾಧ್ಯ ದೈವ ಎಂದು ಹೇಳುವುದರಲ್ಲಿ ತಪ್ಪಿಲ್ಲವೆಂದು ಸಂಸದ ಶ್ರೇಯಸ್ ಪಟೇಲ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಹಾಸನಾಂಬ ಕಲಾಕ್ಷೇತ್ರದಲ್ಲಿ ಭಾನುವಾರ ನಡೆದ ಶ್ರೀ ಕೃಷ್ಣ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಎಂತಹ ಕಷ್ಟ ಬಂದರೂ ಭಗವಂತನ ಸ್ಮರಣೆ ಮಾಡಿದರೆ ಸಮಸ್ಯೆಗೆ ಪರಿಹಾರ ಸಿಗುತ್ತದೆಂಬ ನಂಬಿಕೆ ನಮ್ಮದು ಎಂದರು.

ವಿಧಾನ ಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್ ಮಾತನಾಡಿ, ಸಮಾಜವನ್ನು ಕೈ ಹಿಡಿಯುವವರ ಹಿಂದೆ ಶ್ರೀ ಕೃಷ್ಣ ಪರಮಾತ್ಮ ಇದ್ದೇ ಇರುತ್ತಾನೆ. ಯಾದವ ಸಮುದಾಯದಲ್ಲಿ ಹುಟ್ಟಿದ ಶ್ರೀ ಕೃಷ್ಣ ದೇಶಕ್ಕೆ ಮಾದರಿಯಾಗಿದ್ದಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಶ್ರೀಕೃಷ್ಣರನ್ನು ರಾಜಕೀಯವಾಗಿ ಬಳಸಿಕೊಂಡು ಇಲ್ಲಸಲ್ಲದ ಆರೋಪಗಳು ಪ್ರತ್ಯಾರೋಪಗಳನ್ನು ಮಾಡುತ್ತಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ ಎಂದರು.




ರಾಜ್ಯದಲ್ಲಿ ಗೊಲ್ಲ ಹಾಗೂ ಯಾದವ ಸಮುದಾಯವು ಲಕ್ಷಾಂತರ ಜನಸಂಖ್ಯೆಯನ್ನು ಹೊಂದಿದೆ. ಆದರೆ ಇಂದಿಗೂ ಕೆಲವು ಕಡೆ ಮೂಲಸೌಕರ್ಯಗಳ ಕೊರತೆಯಿಂದ ಬಳಲುತ್ತಿದೆ. ನಮ್ಮ ಬೇಡಿಕೆಗಳ ಈಡೇರಿಕೆಗಾಗಿ ಒಗ್ಗಟ್ಟಿನ ಪ್ರದರ್ಶನ ಬಹಳ ಪ್ರಮುಖವಾಗಿದೆ. ಈ ನಿಟ್ಟಿನಲ್ಲಿ ತಮ್ಮ ಹಕ್ಕುಗಳಿಗಾಗಿ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಬೇಕೆಂದು ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶ್‌ಗೌಡ ಮಾತನಾಡಿ, ಭಾರತೀಯ ಸಾಹಿತ್ಯ ಮತ್ತು ಸಂಸ್ಕೃತಿಯಲ್ಲಿ ರಾಮಾಯಣ, ಮಹಾಭಾರತ ಶ್ರೇಷ್ಠ ಕಾವ್ಯಗಳು. ಜಗತ್ತಿನ ಎಲ್ಲಾ ಸ್ತ್ರೀಯರನ್ನು ಮೋಹಿಸುವ ವ್ಯಕ್ತಿತ್ವ ಶ್ರೀ ಕೃಷ್ಣನದ್ದು, ಕೃಷ್ಣನ ನಿಶಕಾಮ ಪ್ರೀತಿ ಪ್ರೇಮ ಬಿಟ್ಟರೆ ಜಗತ್ತಿನಲ್ಲಿ ಬೇರೆ ಎಲ್ಲೂ ಈ ರೀತಿಯ ಪ್ರೀತಿ ಸಿಗಲು ಸಾಧ್ಯವೇ ಇಲ್ಲವೆಂದು ತಿಳಿಸಿದರು. ಭಾರತ ಖಂಡದ ಧರ್ಮ ಸಂಸ್ಕೃತಿ ಭಾರತಕ್ಕೆ ಮಾದರಿಯಾದವರು ಶ್ರೀ ಕೃಷ್ಣ. ಯುದ್ಧ ಪೂರ್ವದಲ್ಲಿನ ಕೃಷ್ಣ ಇಡೀ ಜಗತ್ತಿಗೆ ಗೊತ್ತು. ಆದರೆ ಯುದ್ಧ ನಂತರದ ಕೃಷ್ಣನ ಬಗ್ಗೆ ತಿಳಿಯುವುದು ತುಂಬಾ ಮುಖ್ಯವಾಗಿದೆ ಎಂದರು.

ಭಾರತೀಯ ಇತಿಹಾಸ ಮತ್ತು ಪುರಾಣಗಳಲ್ಲಿ ಕೃಷ್ಣನನ್ನು ಕೇವಲ ಒಬ್ಬ ದೇವರೆಂದು ಮಾತ್ರವಲ್ಲದೆ ಮಹಾನ್ ರಾಜತಾಂತ್ರಿಕ, ತತ್ವಜ್ಞಾನಿ ಮತ್ತು ಸಮಾಜ ಸುಧಾರಕನೆಂದು ಗೌರವಿಸಲಾಗುತ್ತದೆ.

ಕೃಷ್ಣನ ಇಡೀ ಜೀವನದ ಅತ್ಯುನ್ನತ ಸಾಧನೆ ಎಂದರೆ ಮಾನವಕುಲಕ್ಕೆ ಭಗವದ್ಗೀತೆಯನ್ನು ಕೊಡುಗೆಯಾಗಿ ನೀಡಿದ್ದು ಎಂದರು.

ಅರಕಲಗೂಡು ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಬಿ.ಡಿ.ಶಂಕರೇಗೌಡ ಮಾತನಾಡಿ, ಶ್ರೀ ಕೃಷ್ಣನಿಗೆ ಇರುವಂತಹ ಹೆಸರುಗಳು ಇತರ ಯಾವ ದೇವರಿಗೂ ಇಲ್ಲ. ಹುಟ್ಟಿನಿಂದಲೇ ತುಂಟಾಟಗಳಲ್ಲಿ ಹೆಸರಾಗಿ, ದನಗಳ ಕಾಯುತ್ತ ಗೊಲ್ಲನಾಗಿ, ಕೊಳಲು ಊದುವ ಮೂಲಕಪ್ರಸಿದ್ದರಾಗಿ ಯೌವ್ವನದ ಪ್ರೀತಿ ಪ್ರೇಮಗಳಲ್ಲಿ ಹೆಸರುವಾಸಿಯಾದವರು ಶ್ರೀ ಕೃಷ್ಣ ಎಂದು ತಿಳಿಸಿದರು.

ಕೃಷ್ಣನ ವ್ಯಕ್ತಿತ್ವವು ಅತ್ಯಂತ ಆಕರ್ಷಕ ಮತ್ತು ಬಹುಮುಖಿಯಾದುದು. ಆತ ಬಾಲ ಲೀಲೆಗಳ ಮೂಲಕ ಯಶೋಧೆಗೆ ಆನಂದ ನೀಡಿದ ಪುಟ್ಟ ಕಂದ, ಗೋಪಿಕಾ ಸ್ತ್ರೀಯರ ಮನಗೆದ್ದ ಮುರಳಧರ, ಕಾಳಿಂಗ ಮರ್ದನ ಮಾಡಿದ ಧೀರ, ಕುಚೇಲನಿಗೆ ನೆರವಾದ ಅಪ್ರತಿಮ ಸ್ನೇಹಿತ ಮತ್ತು ಮಹಾಭಾರತ ಯುದ್ಧದಲ್ಲಿ ಅರ್ಜುನನಿಗೆ ದಾರಿ ದೀಪವಾದ ಜಗದ್ರಕ್ಷಕ ಹೀಗೆ ಹಲವಾರು ರೀತಿಯಲ್ಲಿ ಶ್ರೀ ಕೃಷ್ಣ ಜನರ ಮನಸ್ಸು ಗೆದ್ದಿದ್ದಾರೆಂದು ತಿಳಿಸಿದರು.

ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ, ಜಿಲ್ಲಾ ಗೊಲ್ಲ ಸಂಘದ ಅಧ್ಯಕ್ಷ ಹೆಚ್.ರಾಘವ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಹೆಚ್.ಪಿ.ತಾರಾನಾಥ್ ಮತ್ತಿತರರಿದ್ದರು.

# ಕೌಶಲವೇ ಉದ್ಯೋಗಕ್ಕೆ ಪ್ರಮುಖ ಮಾರ್ಗ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕೇವಲ ಅಂಕಗಳಿಕೆಯಿಂದ ಉದ್ಯೋಗ ಪಡೆಯಲು ಸಾಧ್ಯವಿಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಒಂದಲ್ಲ ಒಂದು ಕೌಶಲ್ಯ ಅಡಗಿದ್ದು, ಅದನ್ನು ಗುರುತಿಸಿ ಬೆಳೆಸಿಕೊಂಡರೆ ಉದ್ಯೋಗಾವಕಾಶಗಳನ್ನು ಸುಲಭವಾಗಿ ಪಡೆದುಕೊಳ್ಳಬಹುದೆಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಗೌರವಾಧ್ಯಕ್ಷ ರವಿ ನಾಕಲಗೂಡು ಹೇಳಿದರು.

ನಗರದ ಆಚಾರ್ಯ ಪದವಿ ಕಾಲೇಜಿನಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಉದ್ಯೋಗ ಮೇಳ ಉದ್ಘಾಟಿಸಿ ಮಾತನಾಡಿದ ಅವರು, ಹಿಂದೆ ಉದ್ಯೋಗ ಕಚೇರಿಗಳ ಮೂಲಕ ಉದ್ಯೋಗಾಕಾಂಕ್ಷಿಗಳ ಅರ್ಜಿಗಳನ್ನು ಪರಿಶೀಲಿಸಿ, ಸಂದರ್ಶನ ನಡೆಸಿ ಉದ್ಯೋಗ ನೀಡುವ ವ್ಯವಸ್ಥೆ ಇತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಕಂಪನಿಗಳೇ ಕಾಲೇಜು ಹಾಗು ಉದ್ಯೋಗಾಕಾಂಕ್ಷಿಗಳ ಮನೆ ಬಾಗಿಲಿಗೆ ಬಂದು ನೇಮಕಾತಿ ಪ್ರಕ್ರಿಯೆ ನಡೆಸುತ್ತಿದ್ದರೂ ನಿರುದ್ಯೋಗ ಸಮಸ್ಯೆ ಸಂಪೂರ್ಣವಾಗಿ ನಿವಾರಣೆಯಾಗುತ್ತಿಲ್ಲ ಎಂದರು.

ರಾಜ್ಯ ಹಾಗೂ ದೇಶದಲ್ಲಿ ಕೋಟ್ಯಂತರ ಯುವಕ-ಯುವತಿಯರು ಉದ್ಯೋಗಕ್ಕಾಗಿ ಅಲೆದಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ದಿನದಿಂದ ದಿನಕ್ಕೆ ನಿರುದ್ಯೋಗ ಸಮಸ್ಯೆ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅರ್ಹತೆಯ ಜೊತೆಗೆ ಕೌಶಲಾಭಿವೃದ್ಧಿಗೂ ಆದ್ಯತೆ ನೀಡಬೇಕೆಂದು ಸಲಹೆ ನೀಡಿದರು.



ಇತ್ತೀಚಿನ ದಿನಗಳಲ್ಲಿ ಪೋಷಕರು ತಮ್ಮ ಮಕ್ಕಳು ಅಂಕಪಟ್ಟಿಯಲ್ಲಿ ಹೆಚ್ಚಿನ ಅಂಕ ಗಳಿಸಬೇಕೆಂಬ ವ್ಯಾಮೋಹಕ್ಕೆ ಒಳಗಾಗುತ್ತಿದ್ದಾರೆ. ಆದರೆ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ತನ್ನದೇ ಆದ ಪ್ರತಿಭೆ ಮತ್ತು ಕೌಶಲ ಇರುತ್ತದೆ. ಅದನ್ನು ಗುರುತಿಸಿ ಸೂಕ್ತ ರೀತಿಯಲ್ಲಿ ಬೆಳೆಸಿಕೊಳ್ಳುವುದು ಅಗತ್ಯ. ಕೌಶಲ ಆಧಾರಿತ ಉದ್ಯೋಗಾವಕಾಶಗಳು ಹೆಚ್ಚುತ್ತಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ತಮ್ಮ ಸಾಮರ್ಥ್ಯವನ್ನು ಅರಿತು ಮುನ್ನಡೆಯಬೇಕೆಂದು ಕಿವಿಮಾತು ಹೇಳಿದರು.

ಹೇಮಗಂಗೋತ್ರಿ ವಿಶ್ವವಿದ್ಯಾನಿಲಯದ ಪ್ರೊ. ಮಹದೇವ ಪ್ರಸಾದ್ ಮಾತನಾಡಿ, ವಿದ್ಯಾರ್ಥಿಗಳು ಸದೃಢವಾದ ಆಸಕ್ತಿ, ಶ್ರದ್ಧೆ ಹಾಗೂ ಪರಿಶ್ರಮದಿಂದ ವಿದ್ಯಾಭ್ಯಾಸ ಮಾಡುವುದರ ಜೊತೆಗೆ ತಮ್ಮ ಕೌಶಲ ಬೆಳೆಸಿಕೊಳ್ಳಬೇಕು. ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಿದ್ದರೂ ಅಗತ್ಯ ಕೌಶಲಗಳ ಕೊರತೆಯಿಂದ ಅನೇಕರು ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಗಮನಹರಿಸಬೇಕೆಂದರು.

ಕೆನರಾ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕಿ ದಿಂಪು ರಾಣಿ ಮೇಧಿ ಮಾತನಾಡಿ, ಯುವಕರು ಕೇವಲ ಉದ್ಯೋಗಕ್ಕಾಗಿ ಅಲೆದಾಡುವ ಮನೋಭಾವದಿಂದ ಹೊರಬಂದು, ಸ್ವಯಂ ಉದ್ಯೋಗ ಹಾಗೂ ಉದ್ಯಮಶೀಲತೆಯತ್ತಲೂ ಗಮನಹರಿಸಬೇಕು ಎಂದರು.

# ಹಳೇಬೀಡಿನಲ್ಲಿ ವಿಶ್ವ ಪ್ರವಾಸೋದ್ಯಮ ದಿನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ವಿಶ್ವ ಪ್ರವಾಸೋದ್ಯಮ ದಿನದ ಅಂಗವಾಗಿ ವಿಶ್ವವಿಖ್ಯಾತ ಹಳೇಬೀಡಿನ ಹೊಯ್ಸಳೇಶ್ವರ ದೇಗುಲದ ಆವರಣದಲ್ಲಿ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಹಳೇಬೀಡಿನ ಕೇದಾರನಾಥ ದೇವಾಲಯದ ಸಮೀಪ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ನಂತರ ಡೊಳ್ಳು ಕುಣಿತ ಸೇರಿ ಜಾನಪದ ಕಲಾತಂಡಗಳೊಂದಿಗೆ ಕೇದಾರನಾಥ ದೇವಾಲಯದಿಂದ ವಿಶ್ವವಿಖ್ಯಾತ ಹೊಯ್ಸಳೇಶ್ವರ ದೇಗುಲದ ವರೆಗೆ ಹೆರಿಟೇಜ್ ವಾಕ್ ನಡೆಸಲಾಯಿತು. ದಾರಿಯುದ್ದಕ್ಕೂ ಪಾರಂಪರಿಕ ತಾಣಗಳ ಮಹತ್ವದ ಕುರಿತು ಜನರಲ್ಲಿ ಅರಿವು ಮೂಡಿಸಲಾಯಿತು. ಇದೇ ಸಂದರ್ಭ ಹೊಯ್ಸಳೇಶ್ವರ ದೇಗುಲದ ಆವರಣಗಿಡ ನೆಟ್ಟು ನೀರೆರೆಯುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು.

ಹೆರಿಟೇಜ್ ವಾಕ್ ಸಂದರ್ಭ ಪ್ರವಾಸೋದ್ಯಮದ ಅಭಿವೃದ್ಧಿ ಹಾಗು ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯ ಕಲ್ಪಿಸುವ ಕುರಿತು ಸ್ಥಳೀಯ ಮಾರ್ಗದರ್ಶಿಗಳು



(ಗೈಡ್‌ಗಳು) ಸಾರ್ವಜನಿಕರೊಂದಿಗೆ ಚರ್ಚೆ ನಡೆಸಿದರು. ಈ ಸಂದರ್ಭ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಸಂಬಂಧಿಸಿ ಸ್ಥಳೀಯರಿಂದ ಹಲವು ಸಲಹೆ ಪಡೆಯಲಾಯಿತು. ಬೇಲೂರು ಸೇರಿ ಪ್ರಮುಖ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ಅನುಕೂಲಕ್ಕಾಗಿ ಪಾರ್ಕಿಂಗ್ ವ್ಯವಸ್ಥೆ ಹಾಗೂ ಅಗತ್ಯವಿದ್ದರೆ ಬ್ಯಾಟರಿ ಚಾಲಿತ ವಾಹನಗಳ ವ್ಯವಸ್ಥೆ ಕಲ್ಪಿಸುವ ಕುರಿತು ಸಲಹೆಗಳು ವ್ಯಕ್ತವಾದವು. ಸ್ಥಳೀಯರ ಅನುಭವ ಹಾಗು ಸಲಹೆಗಳನ್ನು ಪ್ರವಾಸೋದ್ಯಮ ಅಭಿವೃದ್ಧಿಯ ದೃಷ್ಟಿಯಿಂದ ಪರಿಗಣಿಸುವ ಕುರಿತು ಚರ್ಚಿಸಲಾಯಿತು.

ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಅಧ್ಯಕ್ಷ ಹಾಗು ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ವಿಶ್ವವಿಖ್ಯಾತ ಹಳೇಬೀಡಿನ ದೇಗುಲವು ಹೊಯ್ಸಳರ ಶಿಲ್ಪಕಲೆಯ ವೈಭವವನ್ನು ಸಾರುವ ಅಪೂರ್ವ ಐತಿಹಾಸಿಕ ಸ್ಮಾರಕವಾಗಿದೆ. ಇಲ್ಲಿನ ಸೂಕ್ಷ್ಮ ಕೆತ್ತನೆ, ವಿಶಿಷ್ಟ ವಾಸ್ತುಶಿಲ್ಪ ಹಾಗೂ ಐತಿಹಾಸಿಕ ಮಹತ್ವ ದೇಶ-ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸುತ್ತಿವೆ. ಇಂತಹ ಅಮೂಲ್ಯ ಸ್ಮಾರಕ ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಪ್ರವಾಸೋದ್ಯಮವು ಸಂಸ್ಕೃತಿ, ಶಾಂತಿ ಮತ್ತು ಸಮೃದ್ಧಿಗೆ ದಾರಿ ಮಾಡಿಕೊಡುತ್ತದೆ. ಪ್ರವಾಸಿ ತಾಣಗಳಿಗೆ ಭೇಟಿ ನೀಡುವ ಪ್ರತಿಯೊಬ್ಬರೂ ಇಲ್ಲಿನ ಐತಿಹಾಸಿಕ ಸ್ಮಾರಕಗಳು ಹಾಗು ಪ್ರಕೃತಿ ಸೌಂದರ್ಯವನ್ನು ಗೌರವಿಸಬೇಕು. ಪ್ರವಾಸಿ ತಾಣಗಳ ಸ್ವಚ್ಛತೆ, ಪರಿಸರ ಸಂರಕ್ಷಣೆ ಹಾಗೂ ಪಾರಂಪರಿಕ ಸ್ಮಾರಕಗಳ ರಕ್ಷಣೆಗೆ ಎಲ್ಲರೂ ಸಹಕರಿಸಬೇಕು ಎಂದರು.

# ಗುಣಮಟ್ಟದ ಶಿಕ್ಷಣ ಆದ್ಯತೆಯಾಗಲಿ: ಶಿಕ್ಷಕರಿಗೆ ಸಚಿವರ ಸಲಹೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವುದು ಶಿಕ್ಷಕರ ಮೊದಲ ಆದ್ಯತೆಯಾಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಹೇಳಿದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ವತಿಯಿಂದ ನಗರದ ಶ್ರೀ ಗುರುಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆಯಲ್ಲಿ ಮಾತನಾಡಿ, ಕಾನ್ವೆಂಟ್ ವ್ಯಾಮೋಹಕ್ಕೆ ಒಳಗಾಗಿರುವ ಪಾಲಕರು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲಿಸುತ್ತಾರೆ. ಸರ್ಕಾರಿ ಶಾಲೆಗಳ ಉಳಿವಿಗಾಗಿ ಪ್ರಾಥಮಿಕ ಶಾಲಾ ಹಂತದಲ್ಲಿ ಮಕ್ಕಳಿಗೆ ಉತ್ತಮ ಶಿಕ್ಷಣ



ನೀಡಬೇಕು ಎನ್ನುವ ಉದ್ದೇಶದಿಂದ ಕೆಪಿಎಸ್ ಶಾಲೆ ಆರಂಭಿಸಲಾಗಿದ್ದು ಉತ್ತಮ ಪ್ರತಿಕ್ರಿಯೆ ದೊರೆತಿದೆ. ಬದಲಾದ ವಿದ್ಯಮಾನದಲ್ಲಿ ಸರ್ಕಾರಿ ಹಾಗೂ ಕಾನ್ವೆಂಟ್‌ಗಳ ನಡುವೆ ಪೈಪೋಟಿ ನಡೆದಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಮಾಡುವ ಶಿಕ್ಷಕರ ಹಿತ ಕಾಯಲು ಮನೆ ಕಟ್ಟಿಕೊಡಲು ಬಿ.ಎಸ್ .ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ವೇಳೆ ತೀರ್ಮಾನ ಮಾಡಿದ್ದರೂ ಕಾರ್ಯಗತವಾಗಲಿಲ್ಲ. ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳಲ್ಲಿ ಶಿಕ್ಷಕರು ಒಂದಿಲ್ಲೊಂದು ಸಮಸ್ಯೆ ಎದುರಿಸುತ್ತಿದ್ದು ಪರಿಹಾರಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಲಿದ್ದೇನೆ ಎಂದರು.

ಸಾಮಾನ್ಯ ಶಿಕ್ಷಕರಾಗಿದ್ದ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರಾಷ್ಟ್ರಪತಿ ಹುದ್ದೆಗೇರಿ ವೃತ್ತಿ ಪಾವಿತ್ರ್ಯತೆ ಎತ್ತಿಹಿಡಿದಿದ್ದು ಅವರ ತತ್ವ, ಚಿಂತನೆ, ಆದರ್ಶಗಳನ್ನು ಮೈಗೂಡಿಸಿಕೊಂಡು ಮುನ್ನಡೆಯೋಣ ಎಂದು ಕರೆ ನೀಡಿದರು.

ತಹಶೀಲ್ದಾರ್ ಎಂ.ಜಿ. ಸಂತೋಷ್ ಕುಮಾರ್ ಮಾತನಾಡಿ, ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಶಿಕ್ಷಕ ಸಮುದಾಯದ ಪ್ರತಿನಿಧಿಯಾಗಿದ್ದು ಜಯಂತಿ ಆಯೋಜನೆ ಔಚಿತ್ಯ ಪೂರ್ಣ ಎಂದರು. ಕ್ಷೇತ್ರ ಶಿಕ್ಷಣಾಧಿಕಾರಿ ಮೋಹನ್ ಕುಮಾರ್, ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್, ಅನಂತ ಸದ್ವಿದ್ಯ ಶಿಕ್ಷಣ ಸಂಸ್ಥೆ ಛೇರ್ಮನ್ ಆರ್.ಅನಂತಕುಮಾರ್ ಮಾತನಾಡಿದರು. ಉತ್ತಮ ಶಿಕ್ಷಕ ಪ್ರಶಸ್ತಿಗೆ ಭಾಜನರಾದ ಪ್ರಾಥಮಿಕ ಹಾಗು ಪ್ರೌಢಶಾಲೆ ಶಿಕ್ಷಕರನ್ನು ಗೌರವಿಸಲಾಯಿತು. ಸರ್ಕಾರಿ, ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಶಿಕ್ಷಕರ ಸಂಘಟನೆ ಪದಾಧಿಕಾರಿಗಳು ಒಳಗೊಂಡಂತೆ ಪ್ರಮುಖರು ಸಮಾರಂಭವನ್ನು ಸಾಕ್ಷೀಕರಿಸಿದರು.

# ಇತಿಹಾಸದಲ್ಲಿ ಈ ದಿನ



## ಸೆಪ್ಟೆಂಬರ್-29

1836: ಮದ್ರಾಸ್ ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಸ್ಥಾಪನೆಯಾಯಿತು.

1942: ಸ್ವಾತಂತ್ರ್ಯ ಹೋರಾಟಗಾರ್ತಿ ಮಾತಂಗಿನಿ ಹಜ್ರಾ ಅವರು ಬಂಗಾಳದ ತಮುಲುಕ್‌ನಲ್ಲಿ ಭಾರತ ಬಿಟ್ಟು ತೊಲಗಿ ಚಳವಳಿಯ ಸಂದರ್ಭದಲ್ಲಿ ಬ್ರಿಟಿಷ್ ಪೊಲೀಸರ ಗುಂಡಿಗೆ ಬಲಿಯಾದರು.

1954: ಅಮೆರಿಕದ ಬೇಸ್‌ಬಾಲ್ ಆಟಗಾರ ವಿಲ್ಲಿ ಮೇಸ್ ಅವರು ವಿಶ್ವ ಸರಣಿ ಪಂದ್ಯದಲ್ಲಿ ಪ್ರಸಿದ್ಧ ಕ್ಯಾಚ್ ಹಿಡಿದರು. ಈ ಘಟನೆ ನಂತರ ದಿ ಕ್ಯಾಚ್ ಎಂದು ಪ್ರಸಿದ್ಧವಾಯಿತು.

1959: ಆರತಿ ಸಾಹಾ ಇಂಗ್ಲಿಷ್ ಚಾನೆಲ್‌ನ್ನು ಈಜಿಕೊಂಡು ದಾಟಿದ ಮೊದಲ ಏಷ್ಯನ್ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಆಗ ಅವರಿಗೆ 19 ವರ್ಷ.

1962: ಕೋಲ್ಕತ್ತಾದ ಬಿರ್ಲಾ ತಾರಾಮಂಡಲ ಉದ್ಘಾಟನೆಯಾಯಿತು.

2009: ಸಮೋವಾ ಸಮೀಪ 8.1 ತೀವ್ರತೆಯ ಭೂಕಂಪ ಸಂಭವಿಸಿ ಸುನಾಮಿ ಉಂಟಾಯಿತು. 189ಕ್ಕೂ ಹೆಚ್ಚು ಮಂದಿ ಮೃತಪಟ್ಟರು.

2011: ತಮಿಳುನಾಡಿನ ವಚಾತಿ ಪ್ರಕರಣದಲ್ಲಿ ವಿಶೇಷ ನ್ಯಾಯಾಲಯವು 269 ಅಧಿಕಾರಿಗಳನ್ನು ದಲಿತರ ಮೇಲಿನ ದೌರ್ಜನ್ಯ ಪ್ರಕರಣದಲ್ಲಿ ದೋಷಿಗಳೆಂದು ತೀರ್ಪು ನೀಡಿತು.

2016: ಉರಿ ದಾಳಿಯ ಬಳಿಕ ಗಡಿ ನಿಯಂತ್ರಣ ರೇಖೆ ಸಮೀಪದ ಉಗ್ರರ ನೆಲೆಗಳ ಮೇಲೆ ಭಾರತೀಯ ಸೇನೆ ಸರ್ಜಿಕಲ್ ಸ್ಟ್ರೈಕ್ ನಡೆಸಿದೆ ಎಂದು ಭಾರತ ಸರ್ಕಾರ ಘೋಷಿಸಿತು. ಪಾಕಿಸ್ತಾನವು ಭಾರತದ ಹೇಳಿಕೆಯನ್ನು ತಿರಸ್ಕರಿಸಿತು.

### ಜನನ

1928: ಭಾರತದ ಮೊದಲ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿದ್ದ ಬ್ರಜೇಶ್ ಮಿಶ್ರಾ

1932: ಖ್ಯಾತ ಹಿಂದಿ ನಟ, ಹಾಸ್ಯನಟ, ನಿರ್ಮಾಪಕ ಹಾಗೂ ನಿರ್ದೇಶಕ ಮಹಮೂದ್ ಅಲಿ

1901: ಎನ್ರಿಕೊ ಫೆರ್ಮಿ, ಖ್ಯಾತ ಭೌತಶಾಸ್ತ್ರಜ್ಞ

# ಸ್ಕೂಲಿಗೇ ಇಟ್ಟ ಉಲ್ಲನ್ ಬಾಂಬು!!!-3

**- ಧನಂಜಯ ಜೀವಾಳ**

ಅಷ್ಟರಲ್ಲಿ ಅದೇ ಊರಿನ ಅನುಕೂಲಸ್ತ ರೈತರೊಬ್ಬರು ತಮ್ಮ ರಾಜ್ದೂತ್ ಬೈಕನ್ನೇರಿ ಬಂದವರೇ ಆ ಮೂರುಜನ ಊರ ಹಿರಿಯರು ಕುಳಿತಿದ್ದ ಕಲ್ಬೆಂಚಿನ ಎದುರು ನಿಲ್ಲಿಸಿಕೊಂಡು ''ಈ ಸಲದ ಏಪೀಎಂಸೀ ಎಲೆಕ್ಷನ್ನಲ್ಲಿ ನಮ್ಮೂರ್ನ್ಯಾರೂ ಓಟ್ಹಾಕಕ್ಕೂಡ್ದು'' ಎಂದರು. ಆ ವೃದ್ಧರಲ್ಲೊಬ್ಬರು ''ಅಲ್ಲಾ ಸಂತಮ್ಮಣ್ಣಾ, ನೀನೇ ಈ ಸಲ ಎಲೆಕ್ಷನ್ನಿಗೆ ನಿಲ್ತೀನಿ ಅಂತ ಓಡಾಡ್ತಿದ್ದೆ, ಈಗ ನೋಡಿದ್ರೆ ಯಾರೂ ಓಟ್ನೇ ಹಾಕ್ಬಾರ್ದು ಅಂತಿದೀಯಲ ಮಾರಾಯ!''

''ಅಲ್ಲಿ ಟೀಏಪೀಸೀಎಂಎಸ್ಸೂ ಇದೆ, ಇಲ್ಲಿ ಏಪೀಎಂಸೀನೂ ಇದೆ, ಎರಡರ ಉದ್ದೇಶ ಒಂದೇ ಆಗಿದ್ದರೆ ಎರಡು ವ್ಯವಸ್ಥೆಗಳು ಯಾಕೆ? ನಾ ಕಂಡ ಕೃಷಿ ಉತ್ಪನ್ನ ಮಾರಾಟ ವ್ಯವಸ್ಥೆಗಳಲ್ಲಿ ಹಾರೆ, ಸಬ್ಬಲ್, ಪಿಕಾಸಿಗಳನ್ನು ಮಾರುತ್ತಾರೆ. ಕೆಲವೆಡೆ ಮನುಷ್ಯರ ಹಾಗೂ ಜಾನುವಾರುಗಳ ಔಷಧಿಗಳನ್ನು ಮಾರುತ್ತಾರೆ. ಅಂಗಡಿ ಮಳಿಗೆಗಳನ್ನು ನಿರ್ಮಿಸಿ ವ್ಯಾಪಾರಿಗಳಿಗೆ ಬಾಡಿಗೆಗೆ ಕೊಡುತ್ತಾರೆ. ಗೊಬ್ಬರ ಹಾಗೂ ಕೀಟನಾಶಕ ಮಾರ್ತಾರೆ. ಕೆಲವೆಡೆ ಪಡಿತರ ವ್ಯವಸ್ಥೆಯ ಅಕ್ಕಿ, ಗೋಧಿ, ಸಕ್ರೆ, ಸೀಮೆಎಣ್ಣೆ ಮಾರ್ತಾರೆ. ಅದರ ಹೆಸರೇ ಹೇಳುವಂತೆ ಕೃಷಿ ಉತ್ಪನ್ನ ಮಾರೋದಾದ್ರೆ, ಇವು ನಾವು ಬೆಳೆಯೋ ಬಾಳೆ, ಭತ್ತ, ಕಾಫಿ, ಏಲಕ್ಕಿ, ಮೆಣಸು, ಶುಂಠಿ, ಅಡಿಕೆ, ತರಕಾರಿ, ಹಣ್ಣು, ಜೋಳ ಇವುಗಳನ್ನ ಮಾರಾಟ ಮಾಡುವ ವ್ಯವಸ್ಥೆ ಮಾಡಿ, ನಮಗೆ ನ್ಯಾಯಯುತ ಬೆಲೆ ಕೊಡಿಸಬೇಕಿತ್ತಲ್ವಾ? ಅದೆಲ್ಲಿ ಮಾಡ್ತಿದಾರೆ? ಉತ್ಪಾದನಾ ವೆಚ್ಚ, ಹಾಕಿರುವ ಬಂಡವಾಳ, ಸಾಲ, ಬಡ್ಡಿ, ನಮ್ಮ ಶ್ರಮ, ನಮಗೆ ಸಿಗಲೇ ಬೇಕಿರುವ ಲಾಭ ಇವನ್ನೆಲ್ಲಾ ಲೆಕ್ಕಕ್ಕೆ ತಗೊಂಡು, ನ್ಯಾಯಯುತ ಬೆಲೆ ನಿಗದಿ ಮಾಡಿ, ನಮ್ಮಿಂದ ಕೊಂಡು, ಮುಕ್ತ ಮಾರುಕಟ್ಟೇಲಿ ಮಾರಲು ಅಲ್ವೇ ಈ ಟೀಏಪೀಸೀಎಮ್ಮೆಸ್ಸು, ಏಪೀಎಂಸೀ ಇರೋದು. ನಮ್ಹತ್ರ ಕೊಂಡುಕೊಳ್ಳೋದಿರ್ಲಿ, ನಮಗೇ ಮಾರ್ತಿದಾರೆ.

ಈ ಬಗೆಯ ವಸ್ತುಗಳನ್ನು ಮಾರಾಟ ಮಾಡಲು ಮತಪಟ್ಟಿ ತಯಾರು ಮಾಡಿ, ಚುನಾವಣೆ ನಡೆಸಿ, ಸರ್ಕಾರೀ ಆಡಳಿತ ಯಂತ್ರ ಬಳಸಿಕೊಂಡು, ಸಾರ್ವಜನಿಕ ಸಂಪನ್ಮೂಲ ವ್ಯಯದ ಅಗತ್ಯ ಉಂಟಾ? ಈ ಎಲ್ಲಾ ವಸ್ತುಗಳು ನಮ್ಮೂರಿನ ಶೆಟ್ರಂಗ್ಡಿ, ಆದಮ್ ಕಾಕಾನ ಅಂಗ್ಡಿ, ಸಿಲ್ವಾನ ಷಾಪಿನಲ್ಲೇ ಸಿಗ್ತವೆ. ಇಷ್ಟಲ್ಲದೇ ನಿಗದಿತ ಚುನಾವಣೆ ಮತ್ತು ಮೀಟಿಂಗು ಮಾಡುವುದನ್ನು ಬಿಟ್ಟರೆ ಸಮಾಜಕ್ಕೆ ಈ ಸಂಸ್ಥೆಗಳಿಂದ ಏನು ಉಪಯೋಗವಿದೆ? ಹುದ್ದೆ ಸೃಷ್ಠಿ ಹಾಗೂ ಗುಂಪುಗಾರಿಕೆ-ಗೊಂದಲಗಳ



ಸೃಷ್ಠಿ ಮಾಡಲು ಹಾಗೂ ಸಾರ್ವಜನಿಕ ಸಂಪನ್ಮೂಲಗಳ ದುರ್ವ್ಯಯ ಮಾಡಲಲ್ಲದೇ ಬೇರಾವ ಉದ್ದೇಶವಿದೆ?''

ಸಂಭಾಷಣೆಯ ವಿಷಯ ಆಸಕ್ತಿಕರವಾಗಿದ್ದನ್ನು ಕಂಡ ಫೀಲ್ಡಾಫಿಸರು ರಾಜಕುಮಾರ ತಾನೂ ಆ ಮಾತುಕತೆಯಲ್ಲಿ ಭಾಗಿಯಾಗುವ ಇಂಗಿತದಿಂದ, ''ನಿಮ್ಮಂತೆ ನಾಮೂ ರೈತರೇ, ಯಜ್ಮಾನ್ರೆ. ಮಾರುಕಟ್ಟೆಯಲ್ಲಿ ತನ್ನ ಕೃಷಿ ಉತ್ಪನ್ನಗಳ ಮೌಲ್ಯ ನಿರ್ಧರಿಸುವ ಸಕಲ ಅಧಿಕಾರ ರೈತನದ್ದೇ. ಜೊತೆಗೆ ನಿರ್ಧರಿಸಲಾಗದ ಅಸಹಾಯಕತೆ ಸಹಾ ರೈತನದ್ದೇ. ರೈತನೇನೂ ಬೇಡಿಕೆ-ಪೂರೈಕೆಗಳ ಸರಳ ತಿಳುವಳಿಕೆ ಇಲ್ಲದವನೇನೂ ಅಲ್ಲ. ಶೀಘ್ರವಾಗಿ ಸಂಪತ್ತು ಪಡೆಯಬೇಕು; ಇಡೀ ರೈತ ಸಮುದಾಯಕ್ಕೆ ಸಿಗಬಹುದಾದ ಲಾಭದ ಸಿಂಹಪಾಲು ತನಗೇ ದಕ್ಕಬೇಕು; ಮಳೆಹಾನಿ, ಬರ, ಬೆಳೆಹಾನಿ ಎಂಬ ಕಾರಣದಿಂದ ಸರ್ಕಾರ ಆರ್ಥಿಕವಾಗಿ ಸದಾ ತನ್ನ ಬೆಂಗಾವಲಿಗೆ ನಿಲ್ಲಬೇಕೆಂಬ ಪರಾವಲಂಬಿ ಮನಸ್ಥಿತಿ; ತನ್ನ ಕುರಿತು ನಿಜ ಕಾಳಜಿ ಇಲ್ಲದವರ ಮೇಲೆ ನಾಯಕತ್ವಕ್ಕಾಗಿನ ಅವಲಂಬನೆ.... ಹೀಗೆ ಹತ್ತಾರು ಕಾರಣಗಳು.

ರೈತ ಬಂಧುಗಳು ಎಲ್ಲಾ ಆಹಾರ ಬೆಳೆಗಳನ್ನು ಮಾರುಕಟ್ಟೆಯ ಬೇಡಿಕೆಯ ಶೇಕಡಾ ಎಂಬತ್ತೈದು ಮಾತ್ರ ಬೆಳೆಯಬೇಕು. ನಿಮ್ಮ ಕೃಷಿ ಭೂಮಿಗೆ ನಿಯಮಿತವಾಗಿ ವಿಶ್ರಾಂತಿ ನೀಡಿ. ಮುಂದಿನ ಬೆಳೆಗೆ ಭೂಮಿಯೂ ಸಡಗರದಿಂದ ಸಜ್ಜುಗೊಳ್ಳುತ್ತದೆ. ಇದರಿಂದ ಬೀಜ, ಗೊಬ್ಬರ, ನೀರು, ಔಷದಿ, ಸಮಯ ಹಾಗೂ ಶ್ರಮ ಉಳಿತಾಯವಾಗುತ್ತದೆ. ಜೊತೆಗೆ ಉತ್ಪಾದನಾ ವೆಚ್ಚಮೂ ಗಣನೀಯವಾಗಿ ಕಡಿಮೆಯಾಗುತ್ತದೆ. ಅಗತ್ಯ ಮೀರಿದ ಉತ್ಪಾದನೆಯಿಂದ ಆಗುವ ಸಂಪನ್ಮೂಲಗಳ ಅಪವ್ಯಯವನ್ನು ತಪ್ಪಿಸಬಹುದು. ಮಾರುಕಟ್ಟೆಯ ನಿಯಂತ್ರಣ ರೈತರ ಹಿಡಿತದಲ್ಲಿರುತ್ತದೆ. ಕೃಷಿಕರ ಶ್ರಮದ ಉತ್ಪಾದನೆಗೆ ನ್ಯಾಯವಾದ ಬೆಲೆ ಸಿಗುತ್ತದೆ. ಅಗತ್ಯವಿರುವವರು ರೈತರು ಹೇಳಿದ ನ್ಯಾಯ ಸಮ್ಮತವಾದ ಬೆಲೆ ಕೊಟ್ಟು ಖರೀದಿಸುತ್ತಾರೆ'' ಎಂದು ಪುಟ್ಟ ಲೆಕ್ಚರನ್ನೇ ಕೊಟ್ಟರು.

ಸಂತಮ್ಮಣ್ಣ, ''ಅತ್ಯುತ್ತಮ ವಾಕ್ಚಾತುರ್ಯ, ಅಸಾಧಾರಣ ಸಂಘಟನಾ ಶಕ್ತಿ, ಹೃದಯದ ತುಂಬಾ ಪ್ರೀತಿ, ಮೇರೆ ಇಲ್ಲದ ತಿಳುವಳಿಕೆ, ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಹಂಬಲ ಇವೆಲ್ಲಾ ಇದ್ದವರು ಅವರು ಪ್ರತಿನಿಧಿಸುವ ಗುಂಪಿನ ನಾಯಕರಾಗಿ ರೂಪುಗೊಳ್ಳುತ್ತಾರೆ. ಆ ಗುಂಪಿನಲ್ಲಿ ತನಗೆ ಸರಿಸಮನಾಗಿ ಇತರೆಯವರು ಉದ್ಭವಿಸದಂತೆ ನಾಜೂಕಾಗಿ ನಿಭಾಯಿಸುತ್ತಾರೆ. ತನ್ನ ಗುಂಪಿನ ಆಶಯಗಳಿಗೆ ಸವಾಲಾಗುವಂತೆ ಆಲೋಚಿಸುವ, ಕಾರ್ಯತಂತ್ರ ರೂಪಿಸುವ ಹಾಗೂ ವಿರುದ್ಧವಾಗಿ ಕಾರ್ಯಾಚರಿಸುವ ಬಹುಸಂಖ್ಯಾತರೊಂದಿಗೆ ಸಖ್ಯ ಬೆಳೆಸಿ, ಅವರುಗಳ ಉದ್ದೇಶಗಳು ಸರಾಗವಾಗಿ ಕಾರ್ಯರೂಪಕ್ಕೆ ಬರುವಂತೆ ನಡೆದುಕೊಳ್ಳುವುದು. ಬಹುಸಂಖ್ಯಾತರೂ ಇದನ್ನೇ ಬಯಸುತ್ತಾರೆ; ಯಾಕೆಂದರೆ, ತಮ್ಮ ಉದ್ದೇಶಗಳನ್ನು ವಿರೋಧಿಸುವವರೂ ಇರಬೇಕು, ಒಂದಷ್ಟು ದಿನ ಗುದ್ದಾಡಬೇಕು, ವಿರೋಧ ವ್ಯಕ್ತಪಡಿಸುವವರೆಲ್ಲರ ಏಕೈಕ ಪ್ರತಿನಿಧಿಯಾಗಿ ಆ ವ್ಯಕ್ತಿಯೇ ಎಸ್ಟಾಬ್ಲಿಷ್ ಆಗಬೇಕು. ವಿರೋಧಿಸುವವನೇ ತಮಗಿರುವ ಏಕೈಕ ಅಡಚಣೆಯಾಗಿರಬೇಕು. ಸಾರ್ವಜನಿಕವಲ್ಲದ ರೀತಿಯಲ್ಲಿ ಆತ ತಮ್ಮವನೇ ಆಗಿರುವುದರಿಂದ 'ಕುರಿ ಕೊಬ್ಬಿದಷ್ಟೂ ಕುರುಬನಿಗೆ ಲಾಭವೆಂಬಂತೆ' ತಾವು ಹಿನ್ನಡೆ ಅನುಭವಿಸಿದಂತೆ ನಟಿಸಿ, ಕೆಲವೇ ಸಮಯದಲ್ಲಿ ಆ ಏಕೈಕ ಪ್ರತಿನಿಧಿಯೇ ಬಹುಸಂಖ್ಯಾತರ ಆಶಯಕ್ಕೆ ಹಸಿರುನಿಶಾನೆ ತೋರಿಸುವಂತೆ ಇಡೀ ಪ್ರಹಸನವನ್ನು ಹೆಣೆಯಲಾಗಿರುತ್ತದೆ.

ನಾ ಕಂಡ ಹಲವಾರು ಸಮುದಾಯದಿಂದೆದ್ದು ಬಂದ ನಾಯಕರುಗಳು ರಾಜಿ-ಪಂಚಾಯ್ತಿಗೆ ಕೂರುವ, ಗ್ರಾಮ ಪಂಚಾಯ್ತಿ ಚುನಾವಣಾ ಉಮೇದುವಾರಿಕೆ ನಿರ್ಧಾರ ಮಾಡುವ, ರಿಯಲ್ ಎಸ್ಟೇಟ್ ವಿವಾದಗಳ ಮಧ್ಯಸ್ತಿಕೆ ನಡೆಸಿಕೊಡುವ, ಆಡಳಿತದ ಪರವಾಗಿ ಲಾಬಿ ಮಾಡುವ, ವಿರೋದಪಕ್ಷಗಳ ಹಸಿವನ್ನು ಶಮನಗೊಳಿಸುವ ಅನುಕೂಲಕ್ಕೊಬ್ಬ ಆಪತ್ಬಾಂಧವನಾಗಿ ವರ್ತಿಸಿದ್ದಾರೆ.

ಅವೇ ಅತ್ಯುತ್ತಮ ವಾಕ್ಚಾತುರ್ಯ, ಅಸಾಧಾರಣ ಸಂಘಟನಾ ಶಕ್ತಿ, ಹೃದಯದ ತುಂಬಾ ಪ್ರೀತಿ, ಮೇರೆ ಇಲ್ಲದ ತಿಳುವಳಿಕೆ, ಜನರಿಗೆ ಒಳ್ಳೆಯದನ್ನು ಮಾಡಬೇಕೆಂಬ ಹಂಬಲ ಇವೆಲ್ಲಾ ಅಂತಿಮವಾಗಿ ಏನನ್ನು ಸಾಧಿಸಿವೆ ಎಂಬುದು ಮುಖ್ಯ.

ರೈತರ ಮೂಲಭೂತ ತೊಡಕುಗಳೇನೆಂದು ತಿಳಿದು ಅವುಗಳ ಪರಿಹಾರಕ್ಕೆ ಬೇಕಾದ ಕಾರ್ಯತಂತ್ರಗಳನ್ನು ರೂಪಿಸುವುದನ್ನು ಬಿಟ್ಟು, ಬೀಜ, ಗೊಬ್ರ, ಔಷ್ಧಿ ಮಾರುವ ಅಂಗಡಿಗಳ ಮೇಲೆ ದಾಳಿ, ಎಕರೆಗೆ ಮುನ್ನೂರ್ರುಪಾಯಿ ಬೆಳೆಹಾನಿ ಪರಿಹಾರ ಇಂತಹ ಹೆಚ್ಚು ಪ್ರಚಾರ ಪಡೆಯುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ, ಆಡಳಿತ ಪಕ್ಷದ ರೈತ ವಿರೋಧಿ ಕಾಯಿದೆ ಪಾಸ್ ಆಗಲು ಬೇಕಿರುವ ಕಾರ್ಯತಂತ್ರಕ್ಕೆ ಉಪಾಯ ಹೇಳಿಕೊಡುತ್ತಾ ಹಾಗೂ ಅಸಹಾಯ ರೈತರು ಆ ಅಸಹಾಯಕತೆಯಲ್ಲಿಯೇ ಇರುವುದನ್ನು ಆಶಿಸುವ ರೈತ ಹೋರಾಟಗಾರರು ರೈತರಿಗಿಂತ ಉದ್ಯಮಿಗಳಿಗೆ, ರಾಜಕಾರಣಿಗಳಿಗೇ ಹೆಚ್ಚು ಆಪ್ಯಾಯಮಾನರು. ಬರ ಬರ್ಲಿ, ನೆರೆ ಬರ್ಲಿ, ಉದ್ಧಾರ ಆಗೋದು ಬೀಜ, ಗೊಬ್ರ, ಔಷ್ಧಿ ಮಾರುವ ಅಂಗಡಿಯವ್ರೆ. ಈಗ ಅದೆಲ್ಲ ಬೇಡ, ಇಂಥಾ ಕಳ್ಳರ ಜೊತೆ ನಮಗೆ ವ್ಯವಹಾರಾನೇ ಬ್ಯಾಡ, ನಮ್ಮೂರಾಗೆ ಈ ಏಪೀಎಂಸೀ ಎಲೆಕ್ಷನ್ನೇ ಬಾಯ್ಕಾಟ್ ಅಂದ್ರೆ ಬಾಯ್ಕಾಟ್ ಅಷ್ಟೇಯ'' ಎಂದು ಬೈಕಿನ ಸ್ಟಾರ್ಟರನ್ನ ಒದ್ದು, ಸೀದಾ ಓಣಿಯೊಂದರೊಳಗೆ ನುಸುಳಿ ಮಾಯವಾದ.

ಕಲ್ಬೆಂಚಿನ ಮುದುಕರೊಬ್ಬರು, ''ಈ ಸಂತಮ್ಮಣ್ಣ ಮಹಾಮಳ್ಳ, ಈತುಂಗೆ ಎಲೆಕ್ಷನ್ನಿಗೆ ನಿಲ್ಲಕ್ಕೆ ಟಿಕೆಟ್ ಕೊಟ್ಟಿಲ್ಲ ಅಂತ ಕಾಣುತ್ತೆ, ಅದುಕ್ಕೇಯ ಎಲೆಕ್ಷನ್ನೇ ಬ್ಯಾಡ, ಏಪೀಎಂಸೀನೇ ಬ್ಯಾಡ ಅಂತಾ ತುತ್ತೂರಿ ಊದ್ತಾ ಇದಾನೆ'' ಎಂದು ಇತರ ಇಬ್ಬರೆಡೆಗೆ ನೋಡಿ ಹುಳ್ಳಗೆ ನಕ್ಕರು. (ಮುಂದುವರೆಯುತ್ತದೆ.)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248